## ಅಪರ ಸಿವಿಲ್  ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ದೊಡ್ಡಬಳ್ಳಾಪುರ

**ಸಿ ಸಿ ನಂ :4989/2025**

**ಪಿ ಡಬ್ಲ್ಯೂ - 2**

**ಸಿ ಡಬ್ಲ್ಯೂ - 2**

**ದಿಃ 21.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಬಿಂದು**

**ತಂದೆಯ ಹೆಸರು ಃ ಲೇಟ್ ಸಂಜೀವ್**

**ವಯಸ್ಸು ಃ 18 ವರ್ಷ**

**ಉದ್ಯೋಗ ಃ ಎಸ್.ಎಸ್.ಎಲ್.ಸಿ. ಅನುತ್ತೀರ್ಣ**

**ವಿಳಾಸ ಃ ಶ್ರೀ ನಗರ, ದೊಡ್ಡಬಳ್ಳಾಪುರ ತಾಲ್ಲೂಕು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ಆರೋಪಿ ಗೊತ್ತು. ಚಾಸಾ-1 ನನ್ನ ತಾಯಿ. ಚಾಸಾ-3 ನನ್ನ ಮಾವ. ನನ್ನ ಹಾಗೂ ಚಾಸಾ-1 ರವರ ನಡುವೆ ಮಾತಿನ ಚಕಮಕಿಯಾದಾಗ ನಾನು ಸಿಟ್ಟಾಗಿ ಮನೆ ಬಿಟ್ಟು ಹೋಗಿದ್ದೆ. ನಂತರ ನಾನು ಮನೆಗೆ ವಾಪಸ್ಸು ಮನೆಗೆ ಬಂದೆ. ಆರೋಪಿ ನನ್ನನ್ನು ಅಪಹರಿಸಿರಲಿಲ್ಲ. ಸಾಕ್ಷಿಯು ನಿಪಿ-4 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಲಂ 183 ಬಿ.ಎನ್.ಎಸ್.ಎಸ್.ನ ಅಡಿಯಲ್ಲಿ ನೀಡಿದ ಹೇಳಿಕೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಹೇಳಿಕೆಯನ್ನು ನಿಪಿ-9 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ನಿಪಿ-4, 6 ಮತ್ತು 9 ರಲ್ಲಿನ ವಿಚಾರಗಳು ನನಗೆ ಗೊತ್ತಿಲ್ಲ. ನಿಪಿ-9 ರಲ್ಲಿನ ವಿಚಾರಗಳನ್ನು ನಾನು ಆ ಸಮಯದಲ್ಲಿ ಕೆಲವು ಒತ್ತಡಗಳಿಂದ ಕೊಟ್ಟಿರುತ್ತೇನೆ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸ ಸ ಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು)**

**CC 4989/2025**
**PW.2**

<u>**ಪಾಟೀ ಸವಾಲುಃ**</u> **ಸ ಸ ಅ ರವರಿಂದಃ**

ನಾನು ಮತ್ತು ಆರೋಪಿ ಪ್ರೀತಿಸುತ್ತಿದ್ದೆವು ಎಂದರೆ ಸರಿಯಲ್ಲ. ನಮ್ಮಿಬ್ಬರ ಪ್ರೀತಿ ವಿಚಾರಕ್ಕೆ ನನ್ನ ತಾಯಿಯ ಒಪ್ಪಿಗೆ ಇರಲಿಲ್ಲ ಎಂದರೆ ಸರಿಯಲ್ಲ. ದಿಃ 29.06.2025 ರಂದು ನಾನು ರೇಷನ್ ತರುವುದಾಗಿ ನಮ್ಮ ಮನೆಯ ಹತ್ತಿರದ ಅಂಗಡಿಗೆ ಹೋಗಿ ಬರುವುದಾಗಿ ನನ್ನ ತಾಯಿ ಚಾಸಾ-1 ರವರಿಗೆ ಹೇಳಿ ಹೋಗಿರುತ್ತೇನೆ ಎಂದರೆ ಸರಿ. ನಂತರ ಮನೆಯಿಂದ ಹೊರಗೆ ಬಂದಾಗ ನನ್ನನ್ನು ಆರೋಪಿಯು ತನ್ನ ಜೊತೆಯಲ್ಲಿ ಅವರ ಮನೆಗೆ ಕರೆದುಕೊಂಡು ಹೋಗಿದ್ದ ಎಂದರೆ ಸರಿಯಲ್ಲ. ಆಗ ಅವರ ಮನೆಯಲ್ಲಿ ಆರೋಪಿಯ ತಾಯಿ ಹಾಗೂ ಹೆಂಡತಿ ಮಕ್ಕಳಿದ್ದು, ನನ್ನ ಬಗ್ಗೆ ವಿಚಾರಿಸಿದಾಗ ಆರೋಪಿ ನನ್ನ ಪರಿಚಯದ ಹುಡುಗಿ ಎಂದು ತಿಳಿಸಿದ್ದ ಎಂದರೆ ಸರಿಯಲ್ಲ. ಆರೋಪಿಯ ತಾಯಿ ನನ್ನನ್ನು ಮನೆಗೆ ಬಿಟ್ಟು ಬರುವಂತೆ ತಿಳಿಸಿದಾಗ ನಾನು ನಮ್ಮ ಮನೆಯಲ್ಲಿ ಬೈಯುತ್ತಾರೆ ಸ್ವಲ್ಪ ದಿವಸ ಇರುವುದಾಗಿ ಅವರ ಮನೆಯಲ್ಲಿಯೇ ವಾಸವಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಆರೋಪಿಯ ತಾಯಿಯೊಂದಿಗೆ ಮಲಗಿ ಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ದಿಃ 03.07.2025 ರಂತೆ ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆ ನಂತರ ದಿಃ 07.07.2025 ರಂದು ನ್ಯಾಯಾಲಯದಲ್ಲಿ ನಾನು ನನ್ನ ಹೇಳಿಕೆಯನ್ನು ದಾಖಲಿಸಿದ್ದೆ ಎಂದರೆ ಸರಿ. ನಂತರ ಸ್ಥಳದ ಪಂಚನಾಮೆಯನ್ನು ದಿಃ 04.07.2025 ರಂದು ಸಂಜೆ 4-00 ರಿಂದ 4-30 ಗಂಟೆ ಸಮಯದವರೆಗೂ ಪಂಚರ ಸಮಕ್ಷಮ ನಿಪಿ-4 ರಂತೆ ಮಾಡಿ ನನ್ನ ಸಹಿಯನ್ನು ಪಡೆಯಲಾಗಿತ್ತು ಎಂದರೆ ಸರಿಯಲ್ಲ. ಆ ನಂತರ ಆರೋಪಿ ನನ್ನನ್ನು ಇಟ್ಟಿದ್ದ ಮನೆಯ ಪಂಚನಾಮೆಯನ್ನು ಪಂಚರ ಸಮಕ್ಷಮ ದಿಃ 04.07.2025 ರಂದು ಸಂಜೆ 5-00 ರಿಂದ 5-30 ಗಂಟೆ ಸಮಯದವರೆಗೂ ನಿಪಿ-6 ರಂತೆ ಮಾಡಿ ನನ್ನ ಸಹಿ ಪಡೆಯಲಾಗಿತ್ತು ಎಂದರೆ ಸರಿಯಲ್ಲ. ಅದೇ ಸಂದರ್ಭದಲ್ಲಿ ನಿಪಿ-5 ಮತ್ತು 7 ಫೋಟೋಗಳನ್ನು ತೆಗೆಯಲಾಗಿತ್ತು ಎಂದರೆ ಸರಿಯಲ್ಲ. ನಿಪಿ-4, 6 ಮತ್ತು 9 ರಲ್ಲಿನ ವಿಚಾರಗಳು ಗೊತ್ತಿದ್ದರು ನಾನು ಸುಳ್ಳು ನುಡಿಯುತ್ತಿದ್ದೇನೆಂದರೆ ಸಾಕ್ಷಿಯು ನಾವು ಈಗ ರಾಜಿಯಾಗಿದ್ದೇವೆಂದು ನುಡಿಯುತ್ತಾರೆ.

ರಾಜಿಯಾದ ಕಾರಣ ಆರೋಪಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೇನೆಂದರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಇಲ್ಲ ಎಂದು ನುಡಿದಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**